# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ,
# ಬೆಂಗಳೂರು ನಗರ

ಸಿಸಿ ಸಂಖ್ಯೆಃ 6926/2016

ಫಿರ್ಯಾದುದಾರರುಃ ಸರ್ಕಾರದ ಪರ ಮಡಿವಾಳ ಪೊಲೀಸರು,
ಬೆಂಗಳೂರು

- ವಿರುದ್ಧ –

ಆರೋಪಿಃ 1. ಶರತ್ ಕೃಷ್ಣನ್ ಬಿನ್ ಪಿ.ಜಿ. ಕುರೂಪ್ 28 ವರ್ಷ

2. ಗೋಪಾಲಕೃಷ್ಣ ಕುರೂಪ್ ಬಿನ್ ಕೃಷ್ಣ ಕುರೂಪ್

3. ಶ್ರೀಮತಿ ಲೀಲಾ ಕುರೂಪ್
ಎಲ್ಲಾರೂ ವಾಸ ಶಿವಂ, ನೇತಾಯಿ ಕೊಡಂ ರಸ್ತೆ, ಪಲ್ಲರಿವಟ್ಟಂ,
ಕೊಚ್ಚಿನ್ -25

## ದೋಷಾರೋಪಣೆ

ಶ್ರೀ ಎಸ್. ಶ್ರೀಧರ, ಬಿ.ಇ. ಎಲ್ ಎಲ್.ಬಿ., ಬೆಂಗಳೂರು ನಗರದ ಮುಖ್ಯ ಮಹಾನಗರ ದಂಡಾಧಿಕಾರಿ ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮನ್ನು ಈ ಕೆಳಕಂಡಂತೆ ಆರೋಪಕ್ಕೆ ಗುರಿಪಡಿಸುತ್ತೇನೆ.

ಚಾಸಾ 1 ಶ್ರೀಮತಿ ಸ್ಮಿತಾ ಇವರ ವಿವಾಹ 1 ನೇ ಆರೋಪಿಯೊಂದಿಗೆ ದಿಃ 27.08.2020 ರಂದು ಆಗಿದ್ದು ನಂತರ ಇಬ್ಬರು ಬೆಂಗಳೂರು ಕೋಡಿಚಿಕ್ಕನಹಳ್ಳಿ,

ಮಹವೀರ್ ಮಾರ್ವೆಲ್ ಅಪಾರ್ಟ್‌ಮೆಂಟ್, ಎ ಬ್ಲಾಕ್, ನಂ. 151 ರಲ್ಲಿ ವಾಸವಾಗಿದ್ದು ಮದುವೆಯ ಸಮಯದಲ್ಲಿ ಆರೋಪಿತರಾದ ನೀವು ಚಾಸಾ 1 ರವರ ಪೋಷಕರಿಂದ 101 ಸವರನ್ ಚಿನ್ನದ ಒಡವೆ ಒಂದು ಚಿನ್ನದ ಚೈನ್, ಒಂದು ಚಿನ್ನದ ಉಂಗುರ ಹಾಗೂ 1 ಲಕ್ಷ ರೂ. ನಗದು ಹಣವನ್ನು ವರದಕ್ಷಿಣೆ ಆಗಿ ಪಡೆದುಕೊಂಡ ಕಾರಣ ವರದಕ್ಷಿಣೆ ಕಾಯ್ದೆ ಕಲಂ 3 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೆಯದಾಗಿ, 1 ರಿಂದ 3 ನೇ ಅರೋಪಿತರಾದ ನೀವು ಚಾಸಾ 3 ಶಶಿಧರನ್ ನಾಯಕ್ ಇವರಿಗೆ ಸೇರಿದ ಆಸ್ತಿಯಲ್ಲಿ ಅರ್ಧ ಭಾಗವನ್ನು ದಾನ ಪತ್ರದ ಮೂಲಕ ಬರೆಸಿಕೊಂಡು ಬರುವಂತೆ ಚಾಸಾ 1 ರವರಿಗೆ ಒತ್ತಾಯ ಮಾಡಿದ ಕಾರಣ ವರದಕ್ಷಿಣೆ ಕಾಯ್ದೆ ಕಲಂ 4 ರ ರೀತಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೆಯದಾಗಿ, 1 ರಿಂದ 3 ನೇ ಅರೋಪಿತರಾದ ನೀವು ಸಮಾನ ಉದ್ದೇಶ ಮುಂದುವರೆಸುತ್ತಾ ಚಾಸಾ 1 ರವರು ಅರ್ಧ ಭಾಗ ಆಸ್ತಿಯನ್ನು ಚಾಸಾ 3 ರವರಿಂದ ತನ್ನ ಹೆಸರಿಗೆ ಬರೆಸಿಕೊಂಡು ಬರುವಂತೆ ಒತ್ತಾಯ ಮಾಡಿ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಕೈಗಳಿಂದ ಹೊಡೆದು ದೈಹಿಕ ಹಾಗೂ ಮಾನಸಿಕವಾಗಿ ಹಿಂಸೆ ನೀಡಿದ್ದು 1 ನೇ ಅರೋಪಿಯಾದ ನೀವು ಚಾಸಾ 1 ರವರ ಶೀಲದ ಬಗ್ಗೆ ಶಂಖಿಸಿ ನಂತರ ಎಲ್ಲಾ ಆರೋಪಿತರು ಸೇರಿಕೊಂಡು 2014 ನೇ ಇಸವಿ ಜೂನ್ ತಿಂಗಳಿನಲ್ಲಿ

ಚಾಸಾ 1 ರವರ ಮನೆಯಲ್ಲಿದ್ದ ಸಾಮಾನುಗಳನ್ನು ತೆಗೆದುಕೊಂಡು ಚಾಸಾ 1 ರವರು ಆಸ್ತಿಯಲ್ಲಿ ಅರ್ಧ ಭಾಗ ಆಸ್ತಿಯನ್ನು ತೆಗೆದುಕೊಂಡು ಬಂದಲ್ಲಿ ಮಾತ್ರ ಸಂಸಾರ ಮಾಡುವುದಾಗಿ ಇಲ್ಲದಿದ್ದಲ್ಲಿ ಡೈವೋರ್ಸ ಕೇಸು ಹಾಕುವುದಾಗಿ ಬೆದರಿಕೆ ಹಾಕಿದಕಾರಣ ಭಾ.ದಂ.ಸಂ ಕಲಂ 498(ಎ) ಇದರ ಜೊತೆ 34 ರ ರೀತಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ .

ಮೇಲಿನ ದೋಷಾರೋಪಣೆ ಕುರಿತು ನಿಮ್ಮ ವಿರುದ್ಧ ನನ್ನ ಮುಂದೆ ವಿಚಾರಣೆ ನಡೆಸಲಾಗುತ್ತದೆ ಎಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಎಸ್ ಶ್ರೀಧರ),
ಮುಖ್ಯ ಮಹಾನಗರ ದಂಡಾಧಿಕಾರಿ,
ಬೆಂಗಳೂರು ನಗರ.

1. ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ದೋಷಾರೋಪಣೆಯನ್ನು ಅರ್ಥಮಾಡಿಕೊಂಡಿರಾ?

ಉತ್ತರಃ

2. ಅಪರಾಧವನ್ನು ಒಪ್ಪಿಕೊಳ್ಳುವಿರಾ ಅಥವಾ ಆರೋಪ ವಿಚಾರಣೆಯಾಗಬೇಕ?

ಉತ್ತರಃ

ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢೀಕರಿಸಿದೆ.

ದಿನಾಂಕ 14.02.2022

ಮುಖ್ಯ ಮಹಾನಗರ ದಂಡಾಧಿಕಾರಿ,
ಬೆಂಗಳೂರು ನಗರ.